Road between Halepalya and Tiptur (construction)

Q.—84. Sri T. G. THIMME GOWDA (Tiptur).—

Will the Government be pleased to state:—

(*a*) what steps, if any, have been taken since the last session to form a road between Halepalya and Tiptur, by the side of the Tiptur tank;

(*b*) if no progress is made, the reasons therefor?

A.—Sri T. CHANNIAH (Minister for Public Health and Local Self-Government).—

(*a*) As the financial position of the District Board, Tumkur, has not improved no steps could be taken in this matter.

(*b*) Does not arise in view of the reply to (*a*).

ಶ್ರೀ ಟಿ. ಜಿ. ತಿಮ್ಮೇಗೌಡ.—ಹಳೇಪಾಳ್ಯ-ತಿಪಟೂರು ರಸ್ತೆ ಮಂಜೂರಾಗಿ ಎಷ್ಟು ವರ್ಷವಾಯಿತು?

ಶ್ರೀ ಟಿ. ಚನ್ನಯ್ಯ.—ಮಂಜೂರಾಗಿಲ್ಲ.

ಶ್ರೀ ಟಿ. ಜಿ. ತಿಮ್ಮೇಗೌಡ.—ಅದಕ್ಕಾಗಿ ಮೂರು ಸಾವಿರ ರೂಪಾಯಿಗಳನ್ನು ಡಿಪಾಜಿಟ್ ಮಾಡಿಲ್ಲವೆ?

ಶ್ರೀ ಟಿ. ಚನ್ನಯ್ಯ.—ಮಾಡಿದ್ದಾರೆ. ಆದರೆ ಡಿಸ್ಟ್ರಿಕ್ಟ್ ಬೋರ್ಡ್ ಕೋಟಾ ಕೊಟ್ಟಿಲ್ಲ. ಆದ್ದರಿಂದ ಆ ಕೆಲಸವನ್ನು ತೆಗೆದುಕೊಂಡಿಲ್ಲ.

ಶ್ರೀ ಟಿ. ಜಿ. ತಿಮ್ಮೇಗೌಡ.—ಡಿಪಾಜಿಟ್ ಮಾಡಿ ಇಷ್ಟು ವರ್ಷಗಳಾದರೂ ಡಿಸ್ಟ್ರಿಕ್ ಬೋರ್ಡ್ ಕೋಟಾ ಕೊಟ್ಟಿಲ್ಲವೇ?

ಶ್ರೀ ಟಿ. ಚನ್ನಯ್ಯ.—ಇಲ್ಲ. ಈ ಸಾರಿ ಇದನ್ನು ತೆಗೆದುಕೊಂಡು ಮುಗಿಸಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸುತ್ತೇನೆ.

ಶ್ರೀ ಟಿ. ಜಿ. ತಿಮ್ಮೇಗೌಡ.—ಈ ವರ್ಷ ಈ ಕೆಲಸ ತೆಗೆದುಕೊಂಡು ಪೂರ್ಣಮಾಡುತ್ತೀರಾ?

ಶ್ರೀ ಟಿ. ಚನ್ನಯ್ಯ.—ಸಾಧ್ಯವಾದಷ್ಟು ಈ ಸಾರಿ ತೆಗೆದುಕೊಂಡು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಈ ಎಸ್ಟಿಮೇಟ್ ಎಷ್ಟಕ್ಕಾಗಿದೆ?

ಶ್ರೀ ಟಿ. ಚನ್ನಯ್ಯ.—ಈಗ ರಿವೈಸ್ಡ್ ಎಸ್ಟಿಮೇಟ್ ಸುಮಾರು 19,500 ರೂಪಾಯಿಗಳಿಗೆ ಆಗಿದೆಯೆಂದು ಗೊತ್ತಾಗಿದೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಪಂಚಾಯಿತಿಯವರು ತಮ್ಮ ಭಾಗದ ಹಣ ಕೊಟ್ಟು ಎಷ್ಟು ವರ್ಷವಾಗಿದೆ?

ಶ್ರೀ ಟಿ. ಚನ್ನಯ್ಯ.—ಕೆಲವು ದಿವಸಗಳಾಯಿತೆಂದು ಆಗಲೇ ಹೇಳಿದೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಈ ಹಣ ಕಟ್ಟಿದಮೇಲೆ ಕೆಲಸ ಸ್ವಲ್ಪ ನಡೆದಿದೆಯಲ್ಲವೆ?

ಶ್ರೀ ಟಿ. ಚನ್ನಯ್ಯ.—ಸ್ವಲ್ಪ ನಡೆದಿದೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಎಷ್ಟು ಕೆಲಸ ನಡೆದಿದೆ?

ಶ್ರೀ ಟಿ. ಚನ್ನಯ್ಯ.—728 ರೂಪಾಯಿಗಳ ಕೆಲಸ ನಡೆದಿದೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಈ ಕೆಲಸ ನಿಂತುಹೋಗಿರುವುದಕ್ಕೆ ಕಾರಣವೇನು?

ಶ್ರೀ ಟಿ. ಚನ್ನಯ್ಯ.—ಡಿಸ್ಟ್ರಿಕ್ಟ್ ಬೋರ್ಡಿನವರು ಕೊಡಬೇಕಾದ ಹಣ ಇನ್ನೂ ಕೊಟ್ಟಿಲ್ಲ, ಆದ್ದರಿಂದ ತೆಗೆದುಕೊಂಡಿಲ್ಲ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಸರ್ಕಾರದವರು ಈ ರಸ್ತೆಗೆ ಗ್ರಾಂಟು ಹಣ ಕೊಡಬೇಕೆಂದು ಕೇಳಿದ್ದರಲ್ಲವೆ?

ಶ್ರೀ ಟಿ. ಚನ್ನಯ್ಯ.—ಕೇಳಿದ್ದರು.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಏಕೆ ಸರ್ಕಾರ ಅದನ್ನು ಕೊಟ್ಟಿಲ್ಲ?

ಶ್ರೀ ಟಿ. ಚನ್ನಯ್ಯ.—ಡಿಸ್ಟ್ರಿಕ್ಟ್ ಬೋರ್ಡಿನಲ್ಲ ಹಣವಿದ್ದರೆ ಅದನ್ನು ಕೊಡಬೇಕೆಂದು ಡೆಪ್ಯುಟಿ ಕಮಿಷನರಿಗೆ ಕೂಡ ತಿಳಿಸಿದೆ. ಅವರ ಉತ್ತರ ಇನ್ನೂ ಬಂದಿಲ್ಲ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಇದು ಡಿಸ್ಟ್ರಿಕ್ಟ್ ಬೋರ್ಡಿನವರಿಗೆ ಸೇರಿರತಕ್ಕ ರೋಡೇ?

ಶ್ರೀ ಟಿ. ಚನ್ನಯ್ಯ.—ಆ ರಸ್ತೆಯನ್ನು ಡಿಸ್ಟ್ರಿಕ್ಟ್ ಬೋರ್ಡಿನವರೇ ಮಾಡಿಸಬೇಕೆಂದು ಸೂಚನೆ ಕೊಡಲಾಗಿದೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಆ ರೀತಿ ತಾವು ಅವರಿಗೆ ಸೂಚನೆ ಕೊಡುವುದಕ್ಕೆ ಜಿಲ್ಲಾ ಬೋರ್ಡಿನವರು ಆ ರಸ್ತೆಯ ಕೆಲಸವನ್ನು ಕೈಗೊಳ್ಳುವುದಾಗಿ ತಿಳಿಸಿದ್ದರೇನು?

ಶ್ರೀ ಟಿ. ಚನ್ನಯ್ಯ.—ಅವರ ಮೂಲಕವೇ ಮೊದಲು ಈ ರಸ್ತೆಗೆ ಹಣವನ್ನು ಡಿಪಾಜಿಟ್ ಮಾಡಿದ್ದರು. ಅದಕ್ಕಾಗಿ ನಾವು ಈ ಕೆಲಸವನ್ನು ಅವರಿಗೆ ವಹಿಸಿದೆವು.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಹಾಗಿಲ್ಲ. ಇದೇನು ಏ. ಏ. ಸಿ. ರಸ್ತೆಯೇ ಅಥವಾ ಜಿಲ್ಲಾ ಬೋರ್ಡ್ ರಸ್ತೆಯೇ?

ಶ್ರೀ ಟಿ. ಚನ್ನಯ್ಯ.—ಅದು ಐ.ಏ.ಸಿ. ರಸ್ತೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಈ ರಸ್ತೆಗಾಗಿ ಅವರಿಗೆ ಯಾವ ಗ್ರಾಂಟನ್ನೂ ಕೊಡದೆ ಇರುವಾಗ ತಾವು ಅವರಿಗೆ ಈ ರಸ್ತೆ ಕಾರ್ಯವನ್ನು ಕೈಗೊಳ್ಳಬೇಕೆಂದು ಹೇಳುವುದಕ್ಕೆ ಕಾರಣವೇನು?

ಶ್ರೀ ಟಿ. ಚನ್ನಯ್ಯ.—ಮೊದಲಿಗೇನೋ ಇದು ಐ.ಏ.ಸಿ. ರೋಡಾಗಿಯೇ ಇತ್ತು. ಆದರೆ ಇತ್ತೀಚೆಗೆ ಈ ರಸ್ತೆಯನ್ನು ಆ ಜಿಲ್ಲಾ ಬೋರ್ಡಿನವರಿಗೇ ವಹಿಸಬೇಕೆಂದು ಮಾಡಿದ್ದೇವೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಯಾವಾಗ ಆ ಜಿಲ್ಲಾ ಬೋರ್ಡಿನವರು ಈ ರಸ್ತೆಗೆ ತಮ್ಮಲ್ಲ ಹಣ ಏಲ್ಲವೆಂದು ಹೇಳಿದರೊ ಆಗ ಆ ಹಣವನ್ನು ಸರ್ಕಾರದವರು ಕೊಡಬೇಕಾಗಿತ್ತಲ್ಲವೇ?

ಶ್ರೀ ಟಿ. ಚನ್ನಯ್ಯ.—ಸರ್ಕಾರದವರೂ ಕೊಡುತ್ತಾರೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಆ ಗ್ರಾಮದಲ್ಲ 300-400 ಕೈ ಮಗ್ಗಗಳು ಕೆಲಸಮಾಡುತ್ತಿವೆ. ದೊಡ್ಡ ಕೈಗಾರಿಕೆ ನಡೆಯುತ್ತಿರುವಂಥ ಗ್ರಾಮ. ಅವರು ಕಳೆದ ಹತ್ತು ವರ್ಷಗಳಿಂದಲೂ ಈ ರಸ್ತೆಗಾಗಿ ಒತ್ತಾಯಪಡಿಸುತ್ತಿದ್ದರೂ ಸರ್ಕಾರದವರು ಅದನ್ ಮಾಡಿಸದೆ ಇದರ ಕೆಲಸವನ್ನು ಸಂಬಂಧವಿಲ್ಲದ ಆ ಜಿಲ್ಲಾ ಬೋರ್ಡಿನವರ ಮೇರೆ ಹಾಕಿ ಅವರನ್ನು ಒತ್ತಾಯಪಡಿಸುತ್ತಿರುವುದಕ್ಕೆ ಕಾರಣವೇನು?

ಶ್ರೀ ಟಿ. ಚನ್ನಯ್ಯ,—ಸರ್ಕಾರದವರು ಕೆಲಸಮಾಡಿಸಿದರೂ ಒಂದೇ ಅಥವಾ ದುಡ್ಡನ್ನು ಆ ಜಿಲ್ಲಾ ಬೋರ್ಡಿಗೆ ಕೊಟ್ಟು ಅದರ ಮೂಲಕ ಈ ಕೆಲಸ ನಡೆಯುವಂತೆ ಮಾಡಿದರೂ ಒಂದೇ. ಆದಕಾರಣ ಈಗ ಈ ರಸ್ತೆಯನ್ನು ಜಿಲ್ಲಾ ಬೋರ್ಡ್ ಮೂಲಕ ಮಾಡಿಸಬೇಕೆಂದಿದ್ದೇವೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಹಾಗಿದ್ದರೆ ಈಗಲಾದರೂ ಸರ್ಕಾರದವರೇ ಹಣ ಕೊಟ್ಟು ಈ ರಸ್ತೆಯನ್ನೇಕೆ ಮಾಡಿಸಬಾರದು?

Sri T. CHANNIAH.—His request will be examined very sympathetically.

ಶ್ರೀ ಸಿ. ಎಚ್. ಲಿಂಗದೇವರು.—1952ರಲ್ಲಿ ಈ ರೋಡ್ ಕ್ಲಾಸಿಫಿಕೇಷ್ಷ ಮಾಡಿದಾಗ ರಸ್ತೆಗಳನ್ನು ಸ್ಟೇಟ್‌ಫಂಡ್ ರಸ್ತೆ, ನ್ಯಾಷನಲ್ ಹೈವೇಸ್, ಜಿಲ್ಲಾ ಬೋರ್ಡ್ ರಸ್ತೆ ಮತ್ತು ಐ.ವಿ.ಸಿ. ರಸ್ತೆಗಳೆಂದು ನಾಲ್ಕು ಭಾಗಗಳಾಗಿ ವಿಂಗಡಿಸಿದ್ದ ವಿಚಾರ ತಮಗೆ ಗೊತ್ತಿಲ್ಲವೇ?

ಶ್ರೀ ಟಿ. ಚನ್ನಯ್ಯ.—ಇದು ಐ.ವಿ.ಸಿ. ರಸ್ತೆಯೇ ಆಗಿದ್ದರೂ ಇತ್ತೀಚೆಗೆ ಇದನ್ನು ಜಿಲ್ಲಾ ಬೋರ್ಡಿಗೆ ವಹಿಸಲಾಗಿದೆ.

Road from Sira to Changavara ((Improvement).

Q.—361. Sri B. N. RAME GOWDA (Sira).—

Will the Government be pleased to state :—

(*a*) whether it has come to their notice that the road from Sira to Changavara is not fit for both heavy and light traffic;

(*b*) whether any improvements have been made to that road?

A.—Sri T. CHANNIAH (Minister for Public Health and Local Self-Government).—

(*a*) No. It is fit for traffic of normal weight.

(*b*) Yes.

ಶ್ರೀ ಬಿ. ಎಕ್. ರಾಮೇಗೌಡ.—ಶಿರಾದಿಂದ-ಚಂಗಾವರಕ್ಕೆ ಹೋಗತಕ್ಕ ರಸ್ತೆಯು ಕಗ್ಗಲದು, ಹೊನ್ನೇನಹಳ್ಳಿ ಗ್ರಾಮಗಳ ಮಧ್ಯೆ ಸಂಪೂರ್ಣವಾಗಿ ಹಾಳಾಗಿಹೋಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಚನ್ನಯ್ಯ.—ಆದರೆ ಆ ರಸ್ತೆ ಈಗ ನೀವು ಹೇಳುವಷ್ಟರ ಮಟ್ಟಿಗೆ ಕೆಟ್ಟುಹೋಗಿಲ್ಲ. ವರ್ಷ ವರ್ಷವೂ ಆ ರಸ್ತೆಗೆ ರಿಪೇರಿ ಕೆಲಸಗಳು ನಡೆಯುತ್ತಲೇ ಇವೆ.

ಶ್ರೀ ಬಿ. ಎಕ್. ರಾಮೇಗೌಡ.—ಜನರು ತಿರುಗಾಡುವುದಕ್ಕೂ ಸಹ ಅಲ್ಲ ಅವಕಾಶವಿಲ್ಲ ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಚನ್ನಯ್ಯ.—ನಮಗೆ ಬಂದಿರತಕ್ಕ ವರದಿಯ ಪ್ರಕಾರ ಜನರು ತಿರುಗಾಡುವುದಕ್ಕೆ ಮಾತ್ರವೇ ಅಲ್ಲ—ಲೈಟ್ ಟ್ರಾಫಿಕ್ ನಡೆಸುವುದಕ್ಕೂ ಕೂಡ ಆ ರಸ್ತೆ ಚೆನ್ನಾಗಿರುತ್ತದೆಂದು ತಿಳಿದು ಬಂದಿದೆ.

ಶ್ರೀ ಬಿ. ಎಕ್. ರಾಮೇಗೌಡ.—ನಾನೇ ಅಲ್ಲಗೆ ಸ್ವತಃ ಹೋಗಿ ನೋಡಿಕೊಂಡು ಬಂದಿದ್ದೇನೆ. ಅಲ್ಲ ರಸ್ತೆ ಸಂಪೂರ್ಣವಾಗಿ ಹಾಳಾಗಿಹೋಗಿದೆ. ಅದು ತಮ್ಮ ಗಮನಕ್ಕೆ ಬಂದಿಲ್ಲವೇ?

ಶ್ರೀ ಟಿ. ಚನ್ನಯ್ಯ.—ಕಳೆದ ಐದು ವರ್ಷಗಳಲ್ಲಿ ಆ ರಸ್ತೆಗೆ 27,403 ರೂಪಾಯಿಗಳು ಖರ್ಚಾಗಿದೆ. ಅಲ್ಲದೆ ಪ್ರತಿ ವರ್ಷವೂ ಆ ರಸ್ತೆ ಸಾಲಾಬಾದು ಕಾಂಗಾರಿ ಕೂಡ ಬಿಡದಂತೆ ನಡೆಸಿಕೊಂಡು ಬಂದಿರುವುದಾಗಿ ನಮಗೆ ಬಂದಿರುವ ವರದಿಯಿಂದ ತಿಳಿದು ಬರುತ್ತದೆ.

ಶ್ರೀ ಟಿ. ಎಕ್. ಮೂಡಲಗಿರಿಗೌಡ.—ಸರ್ಕಾರದವರು ಜಿಲ್ಲಾ ಬೋರ್ಡುಗಳಿಗೆ ಪಾವತಿ ಮಾಡುವ ಪೊಬಲಗನ್ನು ಪಾವತಿ ಮಾಡದೆ ಇರುವುದರಿಂದಲ್ಲವೇ ಆ ಜಿಲ್ಲಾ ಬೋರ್ಡಿನವರಿಗೆ ಈ ರಸ್ತೆಯನ್ನು ನರಿಯಾಗಿ ಮೈನ್‌ಟೈನ್ ಮಾಡಲು ಸಾಧ್ಯವಿಲ್ಲದಂತಾಗಿರುವುದು? ಆದ್ದರಿಂದ ತಾವು ಈ ರಸ್ತೆಗೇನಾದರೂ ಸ್ಪೆಷಲ್ ಗ್ರಾಂಟನ್ನು ಕೊಟ್ಟು ಅದನ್ನು ಸರಿಪಡಿಸಲು ಏರ್ಪಾಡು ಮಾಡುತ್ತೀರಾ?

ಶ್ರೀ ಟಿ. ಚನ್ನಯ್ಯ.—ಜಿಲ್ಲಾ ಬೋರ್ಡಿನವರೇ ಈ ರಸ್ತೆಯನ್ನು ಇನ್ನೂ ಉತ್ತಮವಾಗಿರತಕ್ಕಂಥ ರೀತಿಯಲ್ಲಿ ದುರಸ್ತು ಮಾಡುವಹಾಗೆ ನಾವು ಅವರಿಗೆ ತಿಳಿಸುತ್ತೇವೆ. ನಾವು ಅವರಿಗೆ ಗ್ರಾಂಟ್ ಮೂಲಕ ಮತ್ತು ಸಾಲದ ರೂಪವಾಗಿ ಹಣವನ್ನು ಒದಗಿಸುತ್ತಿದ್ದೇವೆ.

ಶ್ರೀ ಟಿ. ಎಕ್. ಮೂಡಲಗಿರಿಗೌಡ.—ಸರ್ಕಾರ ಈ ಜಿಲ್ಲಾ ಬೋರ್ಡುಗಳಿಗೆ ಯಾವ ಯಾವ ಗ್ರಾಂಟುಗಳನ್ನು ಮತ್ತು ಪೊಬಲಗುಗಳನ್ನು ಕೊಡಬೇಕಾಗಿತ್ತೋ ಅವುಗಳನ್ನು ಕೊಡದೆ ಇರುವುದರಿಂದ ತಾನೆ ಈ ಜಿಲ್ಲಾ ಬೋರ್ಡುಗಳಿಗೆ ಈ ದಿವಸ ಆ ಕಾರ್ಯಗಳನ್ನು ಕೈಗೊಳ್ಳಲು ಆಗದೆ ಇರುವುದು?

ಶ್ರೀ ಟಿ. ಚನ್ನಯ್ಯ.—ಸರ್ಕಾರದವರು ಕೊಡತಕ್ಕ ದ್ದನ್ನು ನಾವು ಕ್ರಮವಾಗಿ ಕೊಡುತ್ತಿದ್ದೇವೆ.

ಶ್ರೀ ಸಿ. ಟಿ. ಹನುಮಂತಯ್ಯ.—ಈ ರಸ್ತೆಯನ್ನು ಪಟ್ಟನಾಯ್ಕನಹಳ್ಳಿ—ಚಂಗಾವರ ಮೂಲಕ ಹಿರಿಯೂರಿಗೆ ಹೋಗಿ ಸೇರುವಂತೆ ಒಂದು ರಸ್ತೆಯನ್ನು ಮಾಡಿಸಿಕೊಡಲು ಜನರು ಕೇಳಿಕೊಂಡಿಲ್ಲವೇ?

ಅಧ್ಯಕ್ಷರು.—ಆ ಪ್ರಶ್ನೆ ಇದಕ್ಕೆ ಸಂಬಂಧಪಡುವುದಿಲ್ಲ.

QUESTIONS FOR ANSWERS ON THE DAY

(But not taken up).

Vidhana Soudha.

Q.—197. Sri B. V. NARAYANA REDDY (Bagepalli-Gudibanda).—

Will the Government be pleased to state :—

(*a*) what is the amount of work of the Vidhana Soudha building so far executed;

(*b*) when is it likely to be completed;

(*c*) what are the estimates for the (i) furniture, (i) electricity, etc., for the same?